# ವೇದಕಾಲದ ಬ್ರಹ್ಮವಾದಿನಿಯರು

ಎಚ್.ವಿ. ನಾಗರಾಜರಾವ್

**ಸಾಮಾನ್ಯವಾಗಿ ಋಷಿಗಳ ಪೈಕಿ ಪುರುಷರ ಹೆಸರೇ ನಮಗೆ ಹೆಚ್ಚಾಗಿ ಕೇಳಿಬರುತ್ತದೆ. ಈ ಲೇಖನದ ಮೂಲಕ ಸ್ತ್ರೀ ಋಷಿಯರನ್ನೂ ಶ್ರೀಯುತ ಹೆಚ್.ವಿ.ನಾಗರಾಜ ರಾವ್ ಅವರು ಪರಿಚಯ ಮಾಡಿಕೊಟ್ಟಿದ್ದಾರೆ. ಶ್ರೀಯುತರು ಮೈಸೂರಿನ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ಹಿರಿಯ ಸಂಶೋಧಕರಾಗಿರುವರು.**

ಸ್ತ್ರೀ-ಪುರುಷ ಎಂಬ ಭೇದವು ದೇಹದಲ್ಲಿ ಮಾತ್ರ. ಒಳಗೆ ಸುಳಿವ ಆತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲ. ಬುದ್ಧಿ, ಪ್ರತಿಭೆ, ಜಿಜ್ಞಾಸೆ ಇವೆಲ್ಲ ಸ್ತ್ರೀಯರಲ್ಲೂ ಪುರುಷರಲ್ಲೂ ಸಮಾನ. ಮುಕ್ತಿಗೆ ಬೇಕಾದ ಅರ್ಹತೆಯನ್ನು ಪುರುಷನಂತೆ ಸ್ತ್ರೀಯೂ ಪಡೆದುಕೊಳ್ಳಬಹುದು. ಪ್ರಾಚೀನಕಾಲದಲ್ಲಿ ಸ್ತ್ರೀಯರಿಗೆ ಉಪನಯನವೂ ವೇದಾಧ್ಯಯನವೂ ಇತ್ತೆಂಬುದನ್ನು **ಪುರಾ ಕಾಲೇ ತು ನಾರೀಣಾಂ ಮೌಂಜೀ ಬಂಧನಮಿಷ್ಯತೇ |** ಇತ್ಯಾದಿ ವಾಕ್ಯಗಳು ಸಮರ್ಥಿಸುತ್ತವೆ. ಕಾಳಿದಾಸನ 'ಅಭಿಜ್ಞಾನಶಾಕುಂತಲ' ವೆಂಬ ನಾಟಕದಲ್ಲಿ ಕಣ್ವಾಶ್ರಮದಲ್ಲಿ ಶಕುಂತಲೆಯನ್ನು ಕಂಡ ದುಷ್ಯಂತ ಮಹಾರಾಜನು—

**ವೈಖಾನಸಂ ಕಿಮನಯಾ**
**ವ್ರತಮಾಪ್ರದಾನಾದ್**
**ವ್ಯಾಪಾರರೋಧಿ ಮದನಸ್ಯ**
**ನಿಷೇವಣೀಯಮ್ ||**

**ಅತ್ಯಂತಮೇವ ಸದೃಶೇಕ್ಷಣ ವಲ್ಲಭಾಭಿ- |**
**ರಾಹೋ ನಿವತ್ಸ್ಯತಿ ಸಮಂ ಹರಿಣಾಂಗನಾಭಿಃ ||**

'ಮದುವೆಯವರೆಗೆ ಮಾತ್ರ ಮನ್ಮಥವ್ಯಾಪಾರಗಳಿಗೆ ಅಡ್ಡಿಯಾದ ಮುನಿವ್ರತವನ್ನು ಈಕೆ ಆಚರಿಸುವಳೋ ಅಥವಾ ತಮ್ಮ ಕಣ್ಣಿನಂದವನ್ನು ಅವಳಲ್ಲಿ ಕಂಡು ಮಿತ್ರರಾಗಿರುವ ಹೆಣ್ಣು ಜಿಂಕೆಗಳೊಡನೆ ಶಾಶ್ವತವಾಗಿ ತಪೋವನದಲ್ಲಿ ನೆಲೆಸುವಳೋ?' ಎಂದು ಪ್ರಶ್ನಿಸುತ್ತಾನೆ. ಇದರಿಂದ ಶಾಶ್ವತವಾಗಿ ತಪಸ್ಸಿನಲ್ಲೇ ತೊಡಗಿ ಬ್ರಹ್ಮಚಿಂತನೆಯನ್ನು ಮಾಡುವ ಸ್ತ್ರೀಯರಿದ್ದರೆಂಬುದು ಸ್ಪಷ್ಟವಾಗುತ್ತದೆ.

ಬ್ರಹ್ಮ ಶಬ್ದಕ್ಕೆ ಅನೇಕ ಅರ್ಥಗಳಿವೆ. ಅವುಗಳಲ್ಲಿ 'ವೇದ' ಎಂಬುದೂ ಒಂದು. (**ವೇದಸ್ತತ್ತ್ವಂ ತಪೋ ಬ್ರಹ್ಮ** ಎಂದು ಅಮರ ಕೋಶದ ನಾನಾರ್ಥವರ್ಗದಲ್ಲಿದೆ. ) ವೇದವನ್ನು ಪಠಿಸುವವರು 'ಬ್ರಹ್ಮವಾದಿನಃ' ಎಂದು ಕರೆಸಿಕೊಳ್ಳುತ್ತಾರೆ. ಋಷಿಗಳು ವೇದಮಂತ್ರಗಳನ್ನು ಸಾಕ್ಷಾತ್ಕರಿಸಿಕೊಂಡು ಉಚ್ಚರಿಸಿದ ಕಾರಣದಿಂದ ಬ್ರಹ್ಮವಾದಿಗಳು. ಹಾಗೆ ಮಂತ್ರಗಳನ್ನು ಸಾಕ್ಷಾತ್ ಕಂಡುಕೊಂಡು ಲೋಕಕ್ಕೆ ನೀಡಿದ ಸ್ತ್ರೀ ಬ್ರಹ್ಮವಾದಿನೀ. ವೇದಕಾಲದಲ್ಲಿ ಇಂಥ ಬ್ರಹ್ಮವಾದಿನಿಯರು ಹಲವರು ಇದ್ದರೆಂದು ವೇದಗಳಿಂದಲೂ, ಅನಂತರ ಕಾಲದ ಆರ್ಷಸಾಹಿತ್ಯದಿಂದಲೂ ತಿಳಿದುಬರುತ್ತದೆ.

> ಸ್ತ್ರೀಯರು ಪುರುಷರಷ್ಟೇ ಹಕ್ಕನ್ನು ಪಡೆದಿದ್ದರೆಂಬುದನ್ನು ಆರ್ಯರ ಸಾಹಿತ್ಯದಲ್ಲಿ ಓದುತ್ತೇವೆ. ಪ್ರಪಂಚದ ಇನ್ನಾವ ಸಾಹಿತ್ಯದಲ್ಲಿಯೂ ನಮಗಿದು ಕಂಡು ಬರುವುದಿಲ್ಲ.
>
> *ಸ್ವಾಮಿ ವಿವೇಕಾನಂದ*

ವೇದಗಳ ಬಗೆಗೆ ವಿಶ್ವಾಸಾರ್ಹವಾದ ಮಾಹಿತಿಯನ್ನು ನೀಡುವ ಗ್ರಂಥ ಶೌನಕಮಹರ್ಷಿವಿರಚಿತವಾದ ಬೃಹದ್‌ದೇವತಾ. ಇದರಲ್ಲಿ ಹಲವರು ಬ್ರಹ್ಮವಾದಿನಿಯರನ್ನು ಸ್ಪಷ್ಟವಾಗಿ ಹೆಸರಿಸಲಾಗಿದೆ:

**ಘೋಷಾ ಗೋಧಾ ವಿಶ್ವವಾರಾ ಅಪಾಲೋಪನಿಷನ್ನಿಷತ್ |**
**ಬ್ರಹ್ಮಜಾಯಾ ಜುಹೂರ್ನಾಮ ಅಗಸ್ತ್ಯಸ್ಯ ಸ್ವಸಾದಿತಿಃ ||**
**ಇಂದ್ರಾಣೀ ಚೇಂದ್ರಮಾತಾ ಚ ಸರಮಾ**
**ರೋಮಶೋರ್ವಶೀ |**
**ಲೋಪಾಮುದ್ರಾ ಚ ನದ್ಯಶ್ಚ**
**ಯಮೀ ನಾರೀ ಚ ಶಶ್ವತೀ ||**
**ಶ್ರೀರ್ಲಾಕ್ಷಾ ಸಾರ್ಪರಾಜ್ಞೀ ವಾಕ್ ಶ್ರದ್ಧಾ**
**ಮೇಧಾ ಚ ದಕ್ಷಿಣಾ |**
**ರಾತ್ರೀ ಸೂರ್ಯಾ ಚ ಸಾವಿತ್ರೀ**
**ಬ್ರಹ್ಮವಾದಿನ್ಯ ಈರಿತಾಃ ||**

(II.೮೨-೮೪)

ಈ ಬ್ರಹ್ಮವಾದಿನಿಯರು ರಚಿಸಿರುವ ಸೂಕ್ತಗಳು ಋಗ್ವೇದದಲ್ಲಿವೆ. ಇವರಲ್ಲಿ ಮೊದಲನೆಯವಳು ಹಾಗೂ ಮುಖ್ಯಳಾದವಳು ಘೋಷಾ. ಋಗ್ವೇದದ ಹತ್ತನೆಯ ಮಂಡಲದ ಮೂವತ್ತೊಂಬತ್ತನೆಯ ಮತ್ತು ನಲವತ್ತನೆಯ ಸೂಕ್ತಗಳನ್ನಿವಳು ರಚಿಸಿದ್ದಾಳೆ. ಇವುಗಳಲ್ಲಿ ಅಶ್ವಿನೀದೇವತೆಗಳ ಸ್ತುತಿಯಿದೆ. **ಗೋಧಾ** ಎಂಬ ಬ್ರಹ್ಮವಾದಿನಿಯು ಋಗ್ವೇದದ ಹತ್ತನೆಯ ಮಂಡಲದ ನೂರ ಮೂವತ್ತನಾಲ್ಕನೆಯ ಸೂಕ್ತದ ಎರಡು ಮಂತ್ರಗಳನ್ನು ರಚಿಸಿದ ಋಷಿ. ಅವುಗಳಲ್ಲಿ ಇಂದ್ರನ ಪ್ರಾರ್ಥನೆಯನ್ನು ಆಕೆ ಮಾಡಿದ್ದಾಳೆ. ವಿಶ್ವವಾರಾ ಎಂಬಾಕೆಯು ಐದನೆಯ ಮಂಡಲದ ಇಪ್ಪತ್ತೆಂಟನೆಯ ಸೂಕ್ತವನ್ನು ರಚಿಸಿದ್ದಾಳೆ. ಇದರ ವಸ್ತು ಅಗ್ನಿ ದೇವನ ಪ್ರಾರ್ಥನೆ. ಈಕೆ ಅತ್ರಿ ವಂಶದವಳು. ಅಪಾಲಾ ಎಂಬ ಸ್ತ್ರೀಋಷಿಯು ಎಂಟನೆಯ ಮಂಡಲದ ತೊಂಬತ್ತೊಂದನೆಯ ಸೂಕ್ತವನ್ನು ರಚಿಸಿದ್ದಾಳೆ. ಈಕೆಯೂ ಅತ್ರಿಯ ಮಗಳು. ಯಾವುದೋ ಚರ್ಮದ ರೋಗದಿಂದ ಬಳಲುತ್ತಿದ್ದ ಈಕೆಗೆ ಇಂದ್ರನು ಪ್ರಸನ್ನನಾಗಿ ಆರೋಗ್ಯವನ್ನೂ ಸೌಂದರ್ಯವನ್ನೂ ಕರುಣಿಸಿದನೆಂದು ತಿಳಿದುಬರುತ್ತದೆ. ಉಪನಿಷತ್ ಮತ್ತು ನಿಷತ್ ಎಂಬಿಬ್ಬರು ಬ್ರಹ್ಮವಾದಿನಿಯರು

ರಚಿಸಿರುವ ಏಳು ಮಂತ್ರಗಳು ಖಿಲ ಸೂಕ್ತಗಳಲ್ಲಿವೆ. ಬ್ರಹ್ಮನ ಹೆಂಡತಿ ಜುಹೂ ಹತ್ತನೆಯ ಮಂಡಲದ ೧೦೯ನೆಯ ಸೂಕ್ತದ ಋಷಿ. ಇವಳಿಗೆ ಬ್ರಹ್ಮಜಾಯಾ ಎಂಬ ಹೆಸರಿದೆ. ಅಗಸ್ತ್ಯನ ಸಹೋದರಿಯಾಗಿದ್ದ ಬ್ರಹ್ಮವಾದಿನಿಯೊಬ್ಬಳು ಹತ್ತನೆಯ ಮಂಡಲದ ಅರವತ್ತನೆಯ ಸೂಕ್ತದ ಆರನೆಯ ಮಂತ್ರವನ್ನು ಜಗತ್ತಿಗೆ ನೀಡಿದವಳು.


ಅದಿತಿ ಎಂಬ ದೇವತೆ ಋಗ್ವೇದದ ಅನೇಕ ಮಂತ್ರಗಳಲ್ಲಿ ದೇವತೆ. ಆದರೆ ಕೆಲವು ಮಂತ್ರಗಳಿಗೆ ಆಕೆಯೆ ಋಷಿ. ಋಗ್ವೇದದ ನಾಲ್ಕನೆಯ ಮಂಡಲದ ಹದಿನೆಂಟನೆಯ ಸೂಕ್ತ ಮತ್ತು ಹತ್ತನೆಯ ಮಂಡಲದ ಎಪ್ಪತ್ತೆರಡನೆಯ ಸೂಕ್ತಗಳು ಈಕೆಯವು.

ಇಂದ್ರಾಣಿ ಎಂದರೆ ಇಂದ್ರನ ಪತ್ನಿ. ಹತ್ತನೆಯ ಮಂಡಲದ ಎಂಬತ್ತಾರನೆಯ ಸೂಕ್ತದ ಕೆಲವು ಮಂತ್ರಗಳನ್ನೂ ಒಂದು ನೂರ ನಲವತ್ತೈದನೆಯ ಸೂಕ್ತವನ್ನೂ ಈಕೆಯ ಹೆಸರಿನಲ್ಲಿ ಪರಿಗಣಿಸಲಾಗಿದೆ. ಹತ್ತನೆಯ ಮಂಡಲದ ಒಂದುನೂರ ಐವತ್ತೊಂಬತ್ತನೆಯ ಸೂಕ್ತದ ಋಷಿಯ ಹೆಸರು ಶಚೀ. ಇದು ಇಂದ್ರಾಣಿಯ ಇನ್ನೊಂದು ಹೆಸರಿರಬಹುದು. ಶೌನಕರು ಶಚಿಯನ್ನು ಪ್ರತ್ಯೇಕವಾಗಿ ಬ್ರಹ್ಮವಾದಿನಿಯರ ಮಧ್ಯದಲ್ಲಿ ಪರಿಗಣಿಸಿಲ್ಲ.

ಹತ್ತನೆಯ ಮಂಡಲದ ಒಂದು ನೂರ ಎಂಟನೆಯ ಸೂಕ್ತದ ಕೆಲವು ಮಂತ್ರಗಳನ್ನು 'ಸರಮಾ' ರಚಿಸಿದಳೆಂದು ಹೇಳಲಾಗಿದೆ. ಸರಮಾ ಎಂದರೆ ಒಂದು ಹೆಣ್ಣು ನಾಯಿಯ ಹೆಸರು ಎಂದು ಅನೇಕರ ಅಭಿಪ್ರಾಯ. (ಸಂಸ್ಕೃತದಲ್ಲಿ ಸಾರಮೇಯ ಎಂದರೆ ನಾಯಿ) ರೋಮಶಾ ಒಂದೇ ಒಂದು ಮಂತ್ರವನ್ನು ರಚಿಸಿದ್ದಾಳೆ. (I.೧೨೬)

ರೋಮನರ ಸಂಘಟನಾ ಶಕ್ತಿಯನ್ನೂ ಗ್ರೀಕರ ಸೌಂದರ್ಯ ಪ್ರಜ್ಞೆಯನ್ನೂ ಹಿಂದೂಗಳ ಬೆನ್ನೆಲುಬಾದ ಧರ್ಮ ಮತ್ತು ಭಗವದ್ಭಕ್ತಿಗಳನ್ನೂ ಸೇರಿಸಿ ಹೊಸ ನಾಗರಿಕತೆಯನ್ನು ಸೃಷ್ಟಿಸಿ..... ಇದು ಮಹಿಳೆಯರಿಂದ ಆಗ ಬೇಕಾಗಿದೆ. ಮುಂದಿನ ಅವತಾರವು ಸ್ತ್ರೀರೂಪದಲ್ಲಿ ಇರುತ್ತದೆ ಎಂದು ನಮ್ಮ ಕೆಲವು ಗ್ರಂಥಗಳು ಹೇಳುತ್ತವೆ.

ಸ್ವಾಮಿ ವಿವೇಕಾನಂದ



ಊರ್ವಶೀ ಲೋಕಪ್ರಸಿದ್ಧಳಾದ ಅಪ್ಸರೆ. ಪುರೂರವಸ್ ಎಂಬ ರಾಜನು ಊರ್ವಶಿಯನ್ನು ಪ್ರೇಮಿಸಿ ವಿಫಲನಾದ ಕಥೆ ವೈದಿಕ ಸಾಹಿತ್ಯದಲ್ಲಿ ಸುಪ್ರಸಿದ್ಧ. ಈ ಕಥೆಯನ್ನೇ ಬಳಸಿಕೊಂಡು ಕಾಳಿದಾಸನು ವಿಕ್ರಮೋರ್ವಶೀಯಮ್ ಎಂಬ ನಾಟಕವನ್ನು ರಚಿಸಿದ್ದಾನೆ. ಋಗ್ವೇದದ ತೊಂಬತ್ತೈದನೆಯ ಸೂಕ್ತವು ಪುರೂರವಸ್-ಊರ್ವಶಿಯರ ಸಂವಾದವನ್ನು ಹೊಂದಿದೆ. ಇದರಲ್ಲಿ ಊರ್ವಶಿಯ ಮಾತುಗಳಿಗೆ ಅವಳೇ ರಚಯಿತ್ರಿಯೆಂದು ಪರಿಗಣಿಸಿ ಬೃಹದ್‌ದೇವತೆಯಲ್ಲಿ ಶೌನಕರು ಅವಳನ್ನೂ ಬ್ರಹ್ಮ ವಾದಿನಿಯರ ಗುಂಪಿಗೆ ಸೇರಿಸಿದ್ದಾರೆ.

ಲೋಪಾಮುದ್ರಾ ಮಹರ್ಷಿ ಅಗಸ್ತ್ಯರ ಪತ್ನಿ. ಈ ಋಷಿ ದಂಪತಿಗಳ ರಚನೆ ಋಗ್ವೇದದ ಹತ್ತನೆಯ ಮಂಡಲದ ೧೭೯ನೆಯ ಸೂಕ್ತ. ಮೂರನೆಯ ಮಂಡಲದ ಮೂವತ್ತಮೂರನೆಯ ಸೂಕ್ತವು ವಿಶ್ವಾಮಿತ್ರ ಮಹರ್ಷಿಗೂ ಎರಡು ನದಿಗಳಿಗೂ ನಡೆದ ಸಂವಾದ. ಆದ್ದರಿಂದ ವಿಪಾಶಾ ಮತ್ತು ಶುತುದ್ರೀ ಎಂಬ ನದಿಗಳನ್ನೇ ಇಲ್ಲಿ ಋಷಿಗಳೆಂದು ಸ್ವೀಕರಿಸಲಾಗಿದೆ. ಯಮ-ಯಮೀ ಸಂವಾದದಲ್ಲಿ (X.೧೦)ಯಮಿಯೂ ಒಬ್ಬ ಋಷಿಯೆಂದು ಎಣಿಸಲ್ಪಟ್ಟಿದ್ದಾಳೆ.

ಅಂಗಿರಸನ ಮಗಳೂ ಆಸಂಗನ ಹೆಂಡತಿಯೂ ಆಗಿದ್ದ ಶಶ್ವತೀ ಒಂದು ಮಂತ್ರಕ್ಕೆ (VIII.೧.೩೪.) ಋಷಿ.

ಖಿಲಸೂಕ್ತಗಳಲ್ಲಿ ಬರುವ ಶ್ರೀಸೂಕ್ತವು (ಹಿರಣ್ಯವರ್ಣಾಂ ಹರಿಣೀಂ ಇತ್ಯಾದಿ) ಜನಪ್ರಿಯವಾದ ಸೂಕ್ತ. ಇದರ ರಚಯಿತ್ರಿಯು ಶ್ರೀ ಎಂಬ ಸ್ತ್ರೀ ಎಂದು ಹೇಳಲಾಗಿದೆ. ಲಾಕ್ಷಾ ಎಂಬಾಕೆಯೂ ಒಂದು ಖಿಲ ಸೂಕ್ತದ ಋಷಿಯೆಂದು ಬೃಹದ್ದೇವತೆಯಲ್ಲಿ ಹೇಳಿದೆ.

ಕದ್ರೂ ಎಂಬ ಹೆಸರಿನಿಂದ ಪ್ರಸಿದ್ಧಳಾದ ಸಾರ್ಪರಾಜ್ಞೀ ಹತ್ತನೆಯ ಮಂಡಲದ ೧೮೯ನೆಯ ಸೂಕ್ತದ ರಚಯಿತ್ರೀ. ಇದೇ ಮಂಡಲದ ಒಂದು ನೂರ ಇಪ್ಪತ್ತೈದನೆಯ ಸೂಕ್ತವನ್ನು ರಚಿಸಿರುವವಳು ಅಂಭೃಣನ ಮಗಳಾದ 'ವಾಕ್' ಎಂಬ ಸ್ತ್ರೀ. ಈ ಸೂಕ್ತವು ಆಂಭೃಣೀ ಸೂಕ್ತವೆಂದೇ ಪ್ರಸಿದ್ಧಿಯನ್ನು ಹೊಂದಿದೆ.

ಹತ್ತನೆಯ ಮಂಡಲದ ಒಂದುನೂರ ಐವತ್ತೊಂದನೆಯ ಸೂಕ್ತದ ಋಷಿಯಾದ ಶ್ರದ್ಧಾ, ಅನಂತರದ ಖಿಲಸೂಕ್ತಕ್ಕೆ ಋಷಿಯಾದ ಮೇಧಾ ಒಂದುನೂರ ಏಳನೆಯ ಸೂಕ್ತಕ್ಕೆ ಋಷಿಯಾದ ದಕ್ಷಿಣಾ ಇತ್ಯಾದಿಗಳು ಭಾವನೆಗಳ ಅಥವಾ ವಸ್ತುಗಳ ಹೆಸರೋ, ಅಥವಾ ಸ್ತ್ರೀಯರ ಹೆಸರೋ ನಿಶ್ಚಯಿಸುವುದು ಕಷ್ಟ. ಭಾರದ್ವಾಜನ ಮಗಳು 'ರಾತ್ರಿ' ಇದೇ ಮಂಡಲದ ಒಂದುನೂರ ಇಪ್ಪತ್ತೇಳನೆಯ ಸೂಕ್ತದ ಋಷಿ. ಸವಿತೃ ದೇವನ ಮಗಳು ಸೂರ್ಯಾ ಸಾವಿತ್ರೀ ಎಂಬತ್ತೈದನೆಯ ಸೂಕ್ತವನ್ನು ರಚಿಸಿದ್ದಾಳೆ.

ಹೀಗೆ ಋಷಿಗಣದಲ್ಲಿ, ಮಂತ್ರ ದ್ರಷ್ಟಾರರಲ್ಲಿ ಸ್ತ್ರೀಯರೂ ಸ್ಥಾನವನ್ನು ಪಡೆದು ಗೌರವಾರ್ಹರಾಗಿದ್ದುದು ನಿರ್ವಿವಾದ.

ಬೃಹದ್ದೇವತೆಯಲ್ಲಿ ಪರಿಗಣಿಸಲ್ಪಟ್ಟಿರುವವರೇ ಅಲ್ಲದೆ ಇತರ ಸ್ತ್ರೀಯರೂ ವೇದಮಂತ್ರಗಳನ್ನು ಸಾಕ್ಷಾತ್ಕರಿಸಿಕೊಂಡು ಋಷಿಗಳಾಗಿ ಪೂಜ್ಯರಾಗಿರುವುದು ವೇದಗಳ ಅಧ್ಯಯನದಿಂದ ತಿಳಿದು ಬರುತ್ತದೆ. ಸಿಕತಾ ನಿವಾವರೀ, ಉಚಥ್ಯ ಋಷಿಯ ಪತ್ನಿ ಮಮತಾ ಮುಂತಾದವರು ಈ ಸಾಲಿಗೆ ಸೇರಲು ಅರ್ಹರಾದ ಸ್ತ್ರೀಯರು. ಉಪನಿಷತ್ ಕಾಲದಲ್ಲಿ ಗಾರ್ಗೀ, ವಾಚಕ್ನವೀ, ಮೈತ್ರೇಯೀ ಮುಂತಾದ ಬ್ರಹ್ಮವಾದಿನಿಯರಿದ್ದುದು ಸ್ಪಷ್ಟ. ಪುರುಷನಿಗಿಂತ ಸ್ತ್ರೀಯು ಯಾವ ವಿಧದಲ್ಲೂ ನ್ಯೂನಳಲ್ಲವೆಂದು ವೈದಿಕಸಾಹಿತ್ಯವು ಹೀಗೆ ತೋರಿಸಿಕೊಟ್ಟಿದೆ.

(ಆಧಾರ: *Poetesses of the Rgveda* by C.K. Shukla Published in Samamnaya Vol.I, No.1, 1992.)